## *Form No.4.*

## *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC : 8/2024**

**CW-8**

**PW- 7**

| | | |
|---|---|---|
| ಸಾಕ್ಷಿಯ ಹೆಸರು | ಃ | ಹರೀಶ್ ಪೂಜಾರಿ |
| ತಂದೆ ಹೆಸರು | ಃ | ಮುದ್ದು ಪೂಜಾರಿ |
| ಪ್ರಾಯ | ಃ | 34 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ | ಃ | ಕಡ್ತಲ |

ದಿನಾಂಕ **: 04.07.2025** ರಂದು ಪಿಡಬ್ಲ್ಯೂ - 7/ಸಿಡಬ್ಲ್ಯೂ - 8 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ಈಗ ನನಗೆ ತೋರಿಸಿದ ಮಹಜರಿನಲ್ಲಿ ನನ್ನ ಸಹಿ ಇದ್ದು, ಸದರಿ ಮಹಜರನ್ನು ಈಗಾಗಲೇ ನಿಪಿ - 10 ಎಂದು ಗುರುತಿಸಲಾಗಿದೆ. ನನ್ನ ಸಹಿಯನ್ನು ನಿಪಿ - 10(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನಾನು ಠಾಣೆಯಲ್ಲಿ ಮಾಡಿರುತ್ತೇನೆ.

ಅದರಲ್ಲಿ ಏನು ಬರವಣಿಗೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿರುವುದಿಲ್ಲ. ಈಗ ತೋರಿಸಿದ ಎರಡು ಫೋಟೋದಲ್ಲಿ ನಾನು ಇದ್ದು, ಸದರಿ ಫೋಟೋಗಳನ್ನು ಈಗಾಗಲೇ ನಿಪಿ - 11 ಮತ್ತು ನಿಪಿ - 12 ಎಂದು ಗುರುತಿಸಲಾಗಿದೆ. ನಾನು ಅಲ್ಲಿ ಹೋಗುತ್ತಿದ್ದಾಗ ಪೋಲೀಸರು ಕರೆದು ನನ್ನ ಫೋಟೋ ತೆಗೆದಿದ್ದಾರೆ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕು ಎಂದು ಹಿರಿಯ.ಸ.ಸ.ಅ. ರವರು ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ </u>ಹಿರಿಯ ಸ.ಸ. ರವರಿಂದಃ

ದಿಃ 25.03.2022 ರಂದು ಪೋಲೀಸರು ನನ್ನನ್ನು ಹಾಗೂ ಚಾಸಾ 7 ರವರನ್ನು ಠಾಣೆಗೆ ಕರೆಸಿದ್ದರು ಎಂದರೆ ಸರಿ. ಠಾಣೆಯಲ್ಲಿ ಆರೋಪಿ ಇದ್ದನು ಎಂದರೆ ನೆನಪಿಲ್ಲ. ಆತನನ್ನು ವಿಚಾರಣೆ ಮಾಡಿದಾಗ ತಾನು ದನ ಕಳ್ಳತನ ಮಾಡಿದ ಜಾಗವನ್ನು ತೋರಿಸುತ್ತೇನೆ ಎಂದು ತಿಳಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಮಹಜರು ಮಾಡಬೇಕು, ನನ್ನನ್ನು ಬನ್ನಿ ಎಂದು ಪೋಲೀಸರು

ಕರೆಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿಯ ಸೂಚನೆಯ ಮೇರೆಗೆ ಪೋಲೀಸರ ವಾಹನದಲ್ಲಿ ನಾನು, ಚಾಸಾ 7 ರವರು ಹಾಗೂ ಪೋಲೀಸರು ದೊಂಡರಂಗಡಿ ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಿ ಹೋಗಿದ್ದು, ಅಲ್ಲಿ ಆರೋಪಿಯು ತಾನು ಕಳ್ಳತನ ಮಾಡಿದ್ದೇನೆ ಎಂದು ಹೇಳಿದ್ದಂತಹ ಸ್ಥಳವನ್ನು ತೋರಿಸಿದ್ದು, ಸದರಿ ಸ್ಥಳದ ಮಹಜರನ್ನು ಮಧ್ಯಾಹ್ನ 3.15 ರಿಂದ 4.15 ರವರೆಗೆ ನಿಪಿ - 10 ರಂತೆ ಮಹಜರು ಮಾಡಿ, ನಿಪಿ - 11 ಮತ್ತು ನಿಪಿ - 12 ರಂತೆ ಫೋಟೋಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ. ಅದೇ ವಿಚಾರವಾಗಿ ಈಗ ನನಗೆ ಓದಿ ಹೇಳಿದಂತೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಅದರ ಹೇಳಿಕೆಯ ಭಾಗವನ್ನು "ಅಂದರೆ ದಿಃ 29.03.2022 ರಂದು ......... ಗುರುತಿಸುತ್ತೇನೆ" ಎಂದು ನಿಪಿ - 14 ಎಂದು ಗುರುತಿಸಲಾಯಿತು. ಸದರಿ ದಿನ ಆರೋಪಿಯು ನನಗೆ ತಾನು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿದ್ದರೂ ಸಹಾ, ನನ್ನ ಸಮಕ್ಷಮ ಮಹಜರು ಮಾಡಿ, ಫೋಟೋಗಳನ್ನು ತೆಗೆದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.